ನವರು ಹೇಳಿಕೆ ಕೊಟ್ಟರು. ನನಗೂ ಅವರಿಗೂ ಆಗ ಘರ್ಷಣೆ ನಡೆಯಿತು. ಆಗ ನೀವೂ ಇದ್ದಿರಿ. ಈಗ ಮುಖ್ಯ ಮಂತ್ರಿಗಳು ಇಲ್ಲಿಯೇ ಇರುವುದರಿಂದ ಇದನ್ನು ಹೇಳುತ್ತಿದ್ದೇನೆ. ಒಂದು ವಿಭಾಗದ ಜನಕ್ಕೂ ಇನ್ನೊಂದು ವಿಭಾಗದ ಜನಕ್ಕೂ ಜಗಳವಾಯಿತು. ೩೨೦ ಜನರನ್ನು ಅರೆಸ್ಟ್ ಮಾಡಬೇಕಾಗಿ ಬಂತು. ಪೋಲೀಸಿನವರು ಆವತ್ತಿನ ದಿವಸ ಕೇಸನ್ನು ಹಾಕಬೇಕಾಗಿ ಬಂದಿದೆ ಎಂದು ಹೇಳಿದರೂ ಕೂಡ ಅಲ್ಲಿನ ವಾಸ್ತವಿಕಾಂಶ ಏನು ಎಂದರೆ, ಕೆಲಸಗಾರರನ್ನು ಹಿಡಿದುಕೊಂಡು ಹೋಗಿ ಪೋಲೀಸರು ಹೊಡೆಯುವುದು ಬಡೆಯುವುದು ಮಾತುತ್ತಿದ್ದಾರೆ. ಕಾಳಿ ನದಿ ಯೋಜನೆಯ ಕೆಲಸ ಕಾರ್ಯಗಳು ನಡೆಯುವುದಕ್ಕೆ ನಮ್ಮ ಅಭ್ಯಂತರವಿಲ್ಲ. ದಯವಿಟ್ಟು ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ, ಕಾರ್ಮಿಕರಿಗೆ ಏನು ಒಂದು ಮಿನಿಮಂ ನೀಡ್ಸ್ ಇದೆ ಅದನ್ನು ಕಲ್ಪಿಸಿಕೊಡಿ, ಪೋಲೀಸರ ಮೇಲೆ ನಿಗಾ ಇಡಿ.

ಶ್ರೀ ಡಿ. ದೇವರಾಜ ಅರಸ್:—ಅಧ್ಯಕ್ಷರೇ, ಇದನ್ನು ಇದ್ದಕ್ಕಿದ್ದ ಹಾಗೆ ಹೇಳಿದರು, ತಾವು ಅಪ್ಪಣೆ ಕೊಟ್ಟಿದ್ದರಿಂದ ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅವರ ಮನಸ್ಸಿನಲ್ಲಿರತಕ್ಕಂಥ ಕಳಕಳಿ ಏನು ಇದೆ, ನಮ್ಮ ಕೆಲಸಗಾರರಿಗೆ ಕೆಲವು ಮಿನಿಮಂ ಫೆಸಲಿಟೀಸ್ ಕೊಡಬೇಕು ಎನ್ನತಕ್ಕಂಥ ದರಲ್ಲಿ ಯಾವ ಅಭ್ಯಂತರವೂ ಇಲ್ಲ ಅದನ್ನು ಮಾಡಬೇಕು, ಅದನ್ನು ಮಾಡದಿದ್ದರೆ ಅದಕ್ಕೆ ತಕ್ಷಣ ಏರ್ಪಾಡು ಮಾಡುತ್ತೇವೆ. ಎರಡನೆಯದಾಗಿ ಪೋಲೀಸ ಅಧಿಕಾರಿಗಳ ಮೇಲೆ ಏನು ಆಪಾದನೆ ಮಾಡುತ್ತಿದ್ದಾರೆ. ಅದರ ಬಗ್ಗೆ ಕೂಡಲೇ ತನಿಖೆ ಮಾಡಿಸೋಣ. You please allow me to get a report immediately and if there is any substance in what you say it deserves to be delat with. That we will do. ಮೂರನೆಯದಾಗಿ, ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು, ಏನೆಂದರೆ ನೀರಿನ ವ್ಯವಸ್ಥೆ ಮಾಡತಕ್ಕ ಜವಾಬ್ದಾರಿ ನಮ್ಮದು ಅದನ್ನು ಮಾಡಿಸೋಣ. ಆದರೆ ಯೂನಿಯನ್ ರೈವಲರಿ ಬರದ ಹಾಗೆ ನೋಡಿಕೊಳ್ಳಿ ಎಂದು ನಿಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್: —ಅಲ್ಲಿ ಯೂನಿಯನ್ ಬರುವುದಕ್ಕೆ ಅವಕಾಶವಿಲ್ಲ.

ಶ್ರೀ ಡಿ. ದೇವರಾಜ ಅರಸ್: —ಸಂತೋಷ. ಬೇರೆ ಬೇರೆ ಸ್ಥಳದಲ್ಲಿ ಆಗಿರತಕ್ಕ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ನಾವು ಕಾಳಿ ನದಿ ಯೋಜನೆಗೆ ಶಡ್ಯೂಲ್ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಅದರಂತೆ ಅಲ್ಲಿ ಕೆಲಸ ಕಾರ್ಯ ಆಗಬೇಕು, ಅದಕ್ಕೆ ತಮ್ಮೆಲ್ಲರ ಸಹಾಯ ಬೇಕು ಎಂದು ನನ್ನ ಪ್ರಾರ್ಥನೆ. ಯಾವುದೇ ಕಾರಣಕ್ಕಾಗಿ ಅಲ್ಲಿ ಪಾಲಿಟಿಕ್ಸ್ ಆಗಲೀ, ಯೂನಿಯನ್ ರೈವಲರಿ ಆಗಲೀ, ಒಂದೂ ಬರುವುದು ಬೇಡ. ನೀವು ಹೇಳಿದಂಥ ವಿಷಯಗಳನ್ನು ಗಮನಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

HARIHAR POLYFIBRE LEAVING WASTE WATERS INTO THE T. B. RIVER WATER

ಶ್ರೀ ಸಿ. ಅಂದಾನಪ್ಪ (ಹಡಗಲಿ):—ಹರಿಹರ ಪಾಲಿ ಫೈಬರ್ಸ್ ಫ್ಯಾಕ್ಟರಿ ವಿಶಪೂರಿತವಾದಂಥ ನೀರನ್ನು ತುಂಗಭದ್ರ ನದಿಯಲ್ಲಿಯೇ ಬಿಡುತ್ತಿರುವುದರಿಂದ ಆ ನೀರು ನದಿಯಲ್ಲಿ ಹರಿದು ಬರುತ್ತಿರುವುದರಿಂದ ಕೆಳಗಡೆ ಇರುವ ನೂರಾರು ಹಳ್ಳಿಗಳ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ. ದನ ಕರುಗಳಿಗೆ ಹಾಗೂ ಮನುಷ್ಯರಿಗೂ ತೊಂದರೆಯಾಗಿದೆ. ಎಷ್ಟೊ ಜನ ಸಾಯುತ್ತಿದ್ದಾರೆ. ಈ ಬಗ್ಗೆ ಅನೇಕ ಸಾರಿ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅರ್ಥ ಸಚಿವರು ನದಿಗೆ ಹೋಗಿ ನೀರನ್ನು ಪರೀಕ್ಷೆ ಮಾಡಿ ನೋಡಿದ್ದಾರೆ, ಅದನ್ನು ನೋಡಲಿಕ್ಕೆ ಸಾಧ್ಯವಿಲ್ಲ, ಆ ನೀರನ್ನು ಕುಡಿಯುವಾಗ ದುರ್ವಾಸನೆ ಬರುತ್ತದೆ. ಆರೋಗ್ಯ ಮಂತ್ರಿಗಳಿಗೂ ಕೂಡ ಎಷ್ಟೋ ಸಾರಿ ಹೇಳಿಕೊಂಡರೂ ಅಲ್ಲಿ ಏನೂ ಮಾಡಲಿಲ್ಲ. ಫಾರೆಸ್ಟ್ ಮಿನಿಸ್ಟರ್ ರವರು ಅದನ್ನು ಫಾರೆಸ್ಟ್ ಕಡೆಗೆ ತಿರುಗಿಸುತ್ತೇವೆಂದು ಹೇಳಿದರು ಅವರೂ ಏನೂ ಮಾಡಲಿಲ್ಲ. ಬೇಸಿಗೆ ಕಾಲ ಬರುತ್ತಿದೆ ಅದರಿಂದ ಭಾರಿ ಅನಾಹುತವಾಗಿ ಅನೇಕ ದನಗಳು ಸಾಯುತ್ತವೆ, ಸಾವಿರಾರು ಜನರಿಗೆ ಹೊಟ್ಟೆ ಕಾಯಿಲೆ ಬರುತ್ತಿದೆ. ೨-೩ ವರ್ಷಗಳಿಂದ ಈ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಸರ್ಕಾರ ದವರು ಇಲ್ಲಿಯವರೆಗೆ ಏನೂಮಾಡಲಿಲ್ಲ, ತತ್‌ಕ್ಷಣ ಅದರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಭಾರಿ ಚಳುವಳಿ ನಡೆಯತಕ್ಕ ಪ್ರಸಂಗವಿದೆ. ಜನರ ಹಿತಕ್ಕಾಗಿ ತತ್‌ಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಏನು ಮಾಡಬೇಕೆಂಬ ಅಭಿಪ್ರಾಯವನ್ನು ಸರ್ಕಾರ ಇಟ್ಟುಕೊಂಡಿದೆ ಅದನ್ನು ತಿಳಿಸ ಬೇಕೆಂದು ವಿನಂತಿಮಾಡಿ ಕೊಳ್ಳುತ್ತೇನೆ.

ಇದೇ ವಿಷಯಕ್ಕೆ ಕಳೆದ ವರ್ಷ ಫಾರೆಸ್ಟ್ ಮಿನಿಸ್ಟರ್ ಮತ್ತು ಹೆಲ್ತ್ ಮಿನಿಸ್ಟರ್ ಸ್ವತಃ ಬಂದು ಭರವಸೆ ನೀಡಿದ್ದಾರೆ. ಮತ್ತು ಈ ಬಗ್ಗೆ ನಾನು ಇನ್ನೊಂದು ವಿಷಯ ಹೇಳುತ್ತೇನೆ. ಅದೇನಂದರೆ

ಕೊಳಚೆ ನೀರನ್ನು ಆಡವಿಯಲ್ಲಿ ಬಿಡಬೇಕು ಎಂದು ಯೋಚನೆ ಮಾಡಿ ಸುಮಾರು ೨೫ ಲಕ್ಷ ರೂಪಾಯಿ ಎಸ್ಟಿಮೇಟ್ ಸರ್ಕಾರಕ್ಕೆ ಬಂದಿದ್ದರೂ ಕೂಡ ಅದನ್ನು ಕಾರ್ಯರೂಪಕ್ಕೆ ತರಲಿಲ್ಲ. ಈ ಬಗ್ಗೆ ಸರ್ಕಾರ ದವರು ಎರಡು ವರ್ಷದಿಂದಲೂ ಏನೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ಜನಗಳಿಗೆ ಬಹಳ ತೊಂದರೆ ಇದೆ. ಪದೇ ಪದೇ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲದೇ ಇರುವುದು ಬಹಳ ಶೋಚನೀಯವಾದ ವಿಚಾರ. ಶ್ರೀಮಾನ್ ಭಂಗಿಯವರು ಹೇಳಿದ ಹಾಗೆ ಈ ಕಾರ್ಖಾನೆಯಿಂದ ಹೊರಬೀಳುವ ಕಲ್ಮಶವಾದ ನೀರನ್ನು ಆ ನದಿಗೆ ಬಿಡುತ್ತಿರುವುದರಿಂದ ೪೫ ಹಳ್ಳಿಗಳಲ್ಲಿರುವ ಜನರಿಗೂ ಮತ್ತು ದನಗಳಿಗೂ ಕೂಡ ಕುಡಿಯುವ ನೀರಿನ ತೊಂದರೆಯಾಗಿದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಎನ್ನುವುದನ್ನು ನಿರ್ದಿಷ್ಟವಾಗಿ ಖಚಿತವಾದಂಥ ಉತ್ತರವನ್ನು ಹೇಳಬೇಕೆಂದು ತಿಳಿಸಲು ಇಚ್ಛಿಪಡುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಗಳು):—ಮಾನ್ಯ ಸದಸ್ಯರು ಹೇಳಿದ ಮಾತು ಸತ್ಯಕ್ಕೆ ದೂರವಾದುದು ಏನೂ ಅಲ್ಲ. ಈಗ ಅದಕ್ಕೆ ಒಂದು ಕಮಿಟಿ ಮಾಡಿದ್ದಾರೆ. ಆದರಲ್ಲಿ ತಜ್ಞರ ರಿಪೋರ್ಟ್ ಕೂಡ ಅವರು ಆ ಕಲ್ಮಶವಾದ ನೀರನ್ನು ನದಿಗೆ ಬಿಡುತ್ತಿರುವುದರಿಂದ ಜನರಿಗೆ ಕುಡಿಯಲು ನೀರಿಗೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಆಗ ವ್ಯವಸಾಯ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ. ಎಚ್. ಪಾಟೀಲರು ಆ ನೀರನ್ನು ಫಾರೆಸ್ಟ್ ಏರಿಯಾಕ್ಕೆ ಬಿಟ್ಟರೆ ಅಲ್ಲಿ ೩ ಸಾವಿರ ಎಕರೆಗೆ ನೀರು ಆಗಿ, ಅದಷ್ಟು ವ್ಯವಸಾಯಕ್ಕೆ ಟ್ರೀಟ್ ಮಾಡಿದರೆ ಅನುಕೂಲವಾಗುತ್ತದೆ. ಆ ರೀತಿ ವ್ಯವಸ್ಥೆ ಮಾಡಿಕೊಳ್ಳೋಣ, ಇಲ್ಲವಾದರೆ ಆ ಕಾರಖಾನೆಗೆ ಬೇಕಾದಂಥ ಮರಗಳು ಆ ಫಾರೆಸ್ಟ್ ಏರಿಯಾದಲ್ಲಿ ಬೆಳೆಸುವುದಕ್ಕೆ ಏರ್ಪಾಡು ಮಾಡೋಣ ಎಂದು ಹೇಳಿದ್ದಾರೆ. ಆದರೆ ಈವೊತ್ತಿನವರೆಗೂ ಆ ಬಗ್ಗೆ ಏನೂ ಆಗಲಿಲ್ಲ. ಆದುದರಿಂದ ಜನಗಳಿಗೆ ಸಹನೆ ಮೀರಿದೆ. ಆ ಕಾರ್ಖಾನೆಯವರು ಸರ್ಕಾರದ ಜೊತೆ ಸಹಕಾರ ಮಾಡಿ ಇದನ್ನು ನಿಲ್ಲಿಸಬೇಕು. ಈ ಬಗ್ಗೆ ಅನೇಕ ಸಾರಿ ಹೇಳಿದ್ದೇವೆ. ಹೇಳಿದರೂ ಸಹ ಏನೂ ಆಗಿಲ್ಲ. ಮತ್ತು ಇದರ ಜೊತೆಗೆ ಈಗ ಬೇಸಿಗೆ ಬಂದಿರುವುದರಿಂದ ದನಗಳಿಗೆ ಮತ್ತು ಜನಗಳಿಗೆ ನೀರು ಕುಡಿಯುವುದಕ್ಕೆ ನೀರು ಇಲ್ಲದೇ ಇರುವುದರಿಂದ ಅದಕ್ಕೆ ಸಂಬಂಧಪಟ್ಟ ೫—೬ ಕ್ಷೇತ್ರದ ಅಸೆಂಬ್ಲಿ ಸದಸ್ಯರುಗಳು ಈ ಬಗ್ಗೆ ಸರ್ಕಾರದವರು ಮುಂದೆ ಯಾವ ಕಾರ್ಯಕ್ರಮ ಕೈಗೊಳ್ಳುತ್ತಾರೆ ಎಂದು ಕೇಳಿದ್ದಾರೆ. ಆದುದರಿಂದ ನಾನು ಹೇಳುತ್ತೇನೆ. ಕೂಡಲೇ ಸರ್ಕಾರ ಆ ಕಾರ್ಖಾನೆಯವರನ್ನು ಕರೆದು ಅವರ ಜೊತೆ ಮಾತನಾಡಿ ಅದಕ್ಕೆ ಯಾವರೀತಿ ಕಾರ್ಯಕ್ರಮ ಕೈಗೊಳ್ಳಬೇಕೋ ಆ ರೀತಿ ಕಾರ್ಯ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಸಿ. ಆಂದಾನಪ್ಪ :—ಅಧ್ಯಕ್ಷರೇ, ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :—ಈ ವಿಚಾರದಲ್ಲಿ ಎಲ್ಲರೂ ಮಾತಾಡಿದ್ದು ನನಗೆ ಚೆನ್ನಾಗಿ ಜ್ಞಾಪಕ ಇದೆ. ಈ ಫ್ಯಾಕ್ಟರಿ ವರವಾಗಿ ಬರಬೇಕೇ ಹೊರತು ಶಾಪವಾಗಿ ಬರಬಾರದು ಎಂದು ಹೇಳಿದ್ದಾರೆ. ಸರ್ಕಾರ ಇದರಲ್ಲಿ ಅಸಹಾಯಕವಾಗಿದೆ. ಕೂಡಲೇ ಈ ಕೆಲಸವನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ.

(INTERRUPTION)

ಇನ್ನೂ ಬೇಕಾದಷ್ಟು ಕೆಲಸ ಇದೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಹೇಳುವುದನ್ನು ನಾನೇ ಹೇಳಿಬಿಟ್ಟಿದ್ದೇನೆ. ಹೀಗೆ ಎಲ್ಲರೂ ಎದ್ದುನಿಂತುಕೊಂಡರೆ ಕೆಲಸ ಆಗುತ್ತದೆಯೇ ? ಈವೊತ್ತು ಕೊನೆಯ ದಿವಸ ಆಗಿರುವುದರಿಂದ ಈ ಅಜಂಡಾದಲ್ಲಿರುವ ಕೆಲಸವನ್ನು ಬೇಗ ಮುಗಿಸದಿದ್ದರೆ ೩ ಗಂಟೆಯವರೆಗೂ ಕೆಲಸ ಮಾಡಿ ಮುಗಿಸಬೇಕಾಗುತ್ತದೆ. ದಯವಿಟ್ಟು ಈ ರೀತಿ ಮಾಡಬೇಡಿ, ಕುಳಿತುಕೊಳ್ಳಿ.

ಶ್ರೀ ಸಿ. ಆಂದಾನಪ್ಪ :—ಈ ಬಗ್ಗೆ ಅರಣ್ಯಖಾತೆ ಮಂತ್ರಿಗಳು ಏನು ಹೇಳದೇ ಇರುವುದರಿಂದ ಮುಖ್ಯ ಮಂತ್ರಿಗಳು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಬೇಕು. ಇದರಿಂದ ಅಲ್ಲಿರುವ ಜನಕ್ಕೆ ಬಹಳ ಸಫರ್ ಆಗುತ್ತಿದೆ. ಬಹಳ ಅನ್ಯಾಯವಾಗಿದೆ. ಈ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಬೇಕು.

Sri M. S. KRISHNAN :—Their license may be cancelled.

ಶ್ರೀ ಡಿ. ದೇವರಾಜ ಅರಸ್ :—ಈ ವಿಚಾರ ಯಾವ ಮಟ್ಟದಲ್ಲಿದೆಯೋ ಗೊತ್ತಿಲ್ಲ. ಈ ಬಗ್ಗೆ ಆ ಕ್ಷೇತ್ರದ ಜನರು ಕೇಳುವುದಕ್ಕೆ ಅಧಿಕಾರ ಇದೆ. ಆದರೆ ಫ್ಯಾಕ್ಟರಿ ಲೈಸನ್ಸನ್ನು ಕ್ಯಾನಸಲ್ ಮಾಡಿಬಿಡಿ

ಎಂದರೆ ಹೇಳಿ. ನಿರುದ್ಯೋಗಿಗಳಾದ ಜನರಿಗೆ ಫ್ಯಾಕ್ಟರಿ ಇಲ್ಲದೇ ಹೋದರೆ ಸಾಯುತ್ತಾರೆ. ಫ್ಯಾಕ್ಟರಿ ಬರಬೇಕಾಯಿತು ಬಂದು. ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿ ಇರುವುದರಿಂದ ಫ್ಯಾಕ್ಟರಿಗಳು ಇನ್ನೂ ಬರಬೇಕು, ಬರುತ್ತದೆ. ಒಂದು ಕಡೆ ಫ್ಯಾಕ್ಟರಿ ಬರಬೇಕಾದರೆ ಅವರಿಗೆ ಏರ್ ಪಲ್ಯೂಷನ್, ವಾಟರ್ ಪಲ್ಯೂಷನ್, ಲ್ಯಾಂಡ್ ಪಲ್ಯೂಷನ್ ಈ ಎಲ್ಲಾ ಸಮಸ್ಯೆ ಇದೆ, ಮತ್ತು ಫ್ಯಾಕ್ಟರಿಯನ್ನು ಹೆಚ್ಚು ಹೆಚ್ಚು ತರಲಿಲ್ಲ ಆದ್ದರಿಂದ ನಿರುದ್ಯೋಗಿಗಳಾದವರಿಗೆ ಕೆಲಸ ಇಲ್ಲ ಎಂದು ಹೇಳುತ್ತೀರಿ ಇನ್ನೊಂದು ಕಡೆ ಅವರ ಲೈಸನ್ಸ್‌ನ್ನು ಕಿತ್ತು ಹಾಕಬೇಕು ಎಂದು ಹೇಳಿದರೆ that is not the solution. ನೀರನ್ನು ಬೇರೆ ಕಡೆ ತಿರುಗಿಸುವುದಕ್ಕೆ ಸಾಧ್ಯವೇ ಅಥವಾ ನೀರನ್ನು ಪ್ಯೂರಿಫಿಕೇಷನ್ ಮಾಡುವುದಕ್ಕೆ ಸಾಧ್ಯವೇ ಈ ಬಗ್ಗೆ Purification is now going on. The Factory was contacted and was asked to put purification plan, and the plant has been established. Even than there may be some other difficulty. The Hon'ble Minister for Forests is not here. ಆದರೆ ಬೇರೆ ಕಡೆ ಆ ನೀರನ್ನು ತಿರುಗಿಸುವುದಕ್ಕೆ ಸಾಧ್ಯ. ಈ ವ್ಯವಸ್ಥೆ ಯೋಗ್ಯವಾಗಿದೆ ಎಂದು ಅವರು ಹೇಳುತ್ತಾರೆ, ಅದನ್ನೆಲ್ಲಾ ಪರಿಶೀಲನೆ ಮಾಡಬೇಕಾದರೆ ಒಂದೆರಡು ದಿವಸದಲ್ಲಿ ಆಗುವುದಿಲ್ಲ. ಪ್ಯೂರಿಫಿಕೇಷನ್ ಪ್ಲಾಂಟ್ ಬರಬೇಕಾದರೆ ಅದು ಎಲ್ಲಿ ಸಿಕ್ಕುತ್ತದೆ, ಎಲ್ಲಿಂದ ಬರುತ್ತದೆ, ಅದು ಬರುವುದಕ್ಕೆ ಎಷ್ಟು ದಿವಸ ಆಗುತ್ತದೆ, ಅದನ್ನು ಯೋಚನೆ ಮಾಡಬೇಕಾಗುತ್ತದೆ. ಇಷ್ಟೇ ಅಲ್ಲದೇ ಇದಕ್ಕೆ ಇನ್ನೇನಾದರೂ ಬೇರೆ ಏನಾದರೂ ಕೆಲಸ ಮಾಡಬೇಕೇ ಇಲ್ಲವೇ ಅದನ್ನೂ ಯೋಚನೆ ಮಾಡಬೇಕಾಗುತ್ತದೆ. ಅಲ್ಲದೇ ಇದಕ್ಕೇನಾದರೂ ಛಾನಲ್ ತೆಗೆಯಬೇಕೇ, ಛಾನಲ್ ತೆಗೆಯಬೇಕಾದರೆ ಇದನ್ನು ಯಾರು ತೆಗೆಯಬೇಕು, ಇದಕ್ಕೆ ಎಷ್ಟು ಕಾಲಬೇಕು, ಇದನ್ನು ಫ್ಯಾಕ್ಟರಿಯವರು ತೆಗೆಯಬೇಕೇ, ಇವೆಲ್ಲವನ್ನೂ ಕೂಡ ಪರಿಶೀಲನೆ ಮಾಡಿ ಇದನ್ನು ಆದಷ್ಟು ಶೀಘ್ರವಾಗಿ ಬಗೆಹರಿಸುತ್ತಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಅಧ್ಯಕ್ಷರೇ, ರೂಲ್ ನಂಬರ್ ೧೭೭ ರ ಪ್ರಕಾರ ಶ್ರೀಮಾನ್ ಕೋಣಂದೂರು ಲಿಂಗಪ್ಪನವರ ಮೇಲೆ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು :—ಈ ವಿಚಾರದಲ್ಲಿ ತಮಗೆ ಕಾಗದ ಬಂದಿರಬೇಕಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಅದು ನನಗೆ ಸಿಕ್ಕಲಿಲ್ಲ.

ಅಧ್ಯಕ್ಷರು :—ಹಾಗಾದರೆ ಈಗ ಮಾನ್ಯ ಸದಸ್ಯರು ನನ್ನ ಛೇಂಬರಗೆ ಬಂದು ನೋಡಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಅಧ್ಯಕ್ಷರೇ, ನಾನು ಒಂದು ಕಾಲಿಂಗ್ ಅಟೇನ್‌ರ್ಷ ನೋಟೀಸು ಕಳುಹಿಸಿದ್ದೇನೆ.

ಅಧ್ಯಕ್ಷರು :—ನಾವು ಪ್ರತಿದಿನವೂ ೨—೩ ಕಾಲಿಂಗ್ ಅಟೇನ್‌ರ್ಷ ನೋಟೀಸುಗಳನ್ನು ಹಾಕುತ್ತಿದ್ದೇವೆ. ಇನ್ನು ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಕೆ. ಎಚ್. ಹನುಮೇಗೌಡ :—ಅಧ್ಯಕ್ಷರೇ, ಇದಕ್ಕೆ ಪರಿಹಾರ ಏನು ಮಾಡುತ್ತೇವೆ ಎನ್ನುವುದನ್ನು ಹೇಳಲಿಲ್ಲ.

ಅಧ್ಯಕ್ಷರು :—ಇಲ್ಲಿ ಈ ರೀತಿ ಮಾತನಾಡಿದರೆ ಪರಿಹಾರ ಸಿಕ್ಕುತ್ತದೆಯೇ ?

ಶ್ರೀ ಕೆ. ಎಚ್. ಹನುಮೇಗೌಡ :—ಅಲ್ಲಿ ರೈತರಿಗೆ ಬಹಳ ಕಷ್ಟವಿದೆ. ಅದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಅಧ್ಯಕ್ಷರು :—ನಾನು ಎಷ್ಟು ಹೇಳಿದರೂ ಮಾನ್ಯ ಸದಸ್ಯರು ಕೇಳುತ್ತಿಲ್ಲ. ಇವರ ಉದ್ದೇಶ ಇಲ್ಲಿ ಅವರು ಹೇಳತಕ್ಕದ್ದನ್ನು ರಿಪೋರ್ಟರುಗಳು ರೆಕಾರ್ಡ್ ಮಾಡಿಕೊಂಡರೆ ಅವರಿಗೆ ಬಹಳ ತೃಪ್ತಿಯಾದಂತೆ ಕಾಣುತ್ತದೆ. ಅದಕ್ಕೆ ಸಂಬಂಧಪಟ್ಟವರಲ್ಲಿ ವಿಷಯ ತಿಳಿಸಿ ಅದಕ್ಕೆ ಪ್ರಯತ್ನ ಮಾಡಬೇಕು.